ಅವನಿಗೆ ವಿಶ್ವಾಸ ಮೂಡಿತು. ಅವನಿಡೀ ಶರೀರ ಮತ್ತೆ ಕಂಪಿಸಿತು. ಅವನು ತನ್ನೆರಡು ಅಂಗೈಗಳನ್ನು ಪರಸ್ಪರ ತಿಕ್ಕಿ ಶರೀರದ ಕಂಪನವನ್ನು ತಡೆಯಲು ಪ್ರಯತ್ನಿಸಿದ. ಕಂಪನ ನಿಂತಾಗ, ತನ್ನ ಪ್ಯಾಂಟಿನ ಹೊರ ಜೇಬಿನಲ್ಲಿ ಮುನ್ನೂರು ನಾಲ್ಕುನೂರು ರೂಪಾಯಿಗಳಿವೆ, ಆದರೆ ತನ್ನ ಗುಪ್ತ ಜೇಬಿನಲ್ಲಿ ಹತ್ತು ಸಾವಿರ ರೂಪಾಯಿಗಳಿವೆ, ಈ ಹತ್ತು ಸಾವಿರ ರೂಪಾಯಿಗಳನ್ನು ಹೆಂಡತಿಗೆ ದಿಲ್ಲಿಯಿಂದ ಹೊಸ ಡಿಸೈನಿನ ಬಂಗಾರದ ಆಭರಣವನ್ನು ತರಲು ಇಟ್ಟುಕೊಂಡಿದ್ದು ನೆನಪಾಯಿತು.

ಒಂದು ವೇಳೆ ಚಾಲಕನಿಗೆ ಅನುಮಾನ ಬಂದು, ತನ್ನ ಗುಪ್ತ ಜೇಜಿನಲ್ಲಿ ಹಣವಿರುವುದು ತಿಳಿದರೆ, ಅವನು ತನ್ನನ್ನು ಖಂಡಿತ ಸಾಯಿಸುತ್ತಾನೆ; ತಾನು ಸಾಯುವ ಬಗ್ಗೆ ಯೋಚಿಸಿಯೇ ಅವನ ಕಣ್ಣುಗಳು ಮುಚ್ಚಿಕೊಂಡವು. ಈ ಮಧ್ಯೆ ಚಾಲಕ ಮೂತ್ರ ವಿಸರ್ಜನೆ ಮಾಡಿ, ರಿಕ್ಷಾದೊಳಗೆ ಬಂದು ಕೂತದ್ದು ಅವನಿಗೆ ತಿಳಿಯಲೇ ಇಲ್ಲ. ರಿಕ್ಷಾ ಮತ್ತೆ ಮುಂದಕ್ಕೆ ಸಾಗಿತು.

ಅವನ ಮೆದುಳಿನಲ್ಲಿ ಯೋಚನೆಗಳು ತೀವ್ರ ಗತಿಯಲ್ಲಿ ಮೂಡುತ್ತಿದ್ದವು. ತಾನು ಚಾಲಕನಿಗೆ ನಿಜ ನಿಜ ಸಂಗತಿಗಳನ್ನು ಹೇಳುವೆ; ತನ್ನ ಗುಪ್ತ ಜೇಬು ಎಲ್ಲಿದೆ, ಅದರಲ್ಲಿ ಎಷ್ಟು ದುಡ್ಡಿದೆ ಎಂಬುದನ್ನೂ ಹೇಳುವೆ ಎಂದು ಅವನು ಯೋಚಿಸಿದ.

ಹಾಗಂತ ಚಾಲಕ ಎಷ್ಟೇ ಪ್ರಯತ್ನಿಸಿದರೂ ಅವನಿಗೆ ತನ್ನ ಗುಪ್ತ ಜೇಬಿನ ಬಗ್ಗೆ ತಿಳಿಯುವುದಿಲ್ಲವೆಂಬುದು ಗೊತ್ತಿದೆ. ಗುಪ್ತ ಜೇಬಿನ ನೆನಪಾಗುತ್ತಲೇ ಅವನ ಮುಖದಲ್ಲಿ ಮುಗುಳ್ನಗೆ ಮೂಡಿತು; ನಿಜ ಹೇಳಬೇಕೆಂದರೆ ಅವನ ಕೈ ಮುಂದಕ್ಕೆ ಚಾಚಿತು. ಇಂಥ ಗುಪ್ತ ಜೇಬಿನ ಉಪಾಯವನ್ನು ಅವನು ತನ್ನ ಹೆಂಡತಿಯಿಂದ ಕಲಿತಿದ್ದಾನೆ. ಅವನ ಹೆಂಡತಿ ಅವನ ಚಡ್ಡಿಯ ಒಳ ಭಾಗದಲ್ಲಿ ಒಂದು ಬಟ್ಟೆಯ ತುಂಡನ್ನು ಹೊಲಿದು ಗುಪ್ತ ಜೇಬನ್ನಿಟ್ಟಿದ್ದಾಳೆ. ಆ ಜೇಬಿನಲ್ಲಿ ಹಣವನ್ನಿಟ್ಟು ಮೇಲಿನಿಂದ ಪಿನ್ ಹಾಕಲಾಗಿದೆ. ಇಂಥ ನಾಜೂಕು ಜಾಗದಲ್ಲಿ ಹೊಲಿಯಲಾದ ಗುಪ್ತ ಜೇಬಿನ ಬಗ್ಗೆ ಯಾರಿಗೂ ಸುಳಿವು ಸಿಗಲಾರದೆಂಬ ನಂಬಿಕೆ ಅವನಿಗಿದೆ. ರಿಕ್ಷಾ ಚಾಲನಿಗೆ ತನ್ನ ಗುಪ್ತ ಜೇಬಿನ ಸಂಗತಿ ತಿಳಿಯುವುದಿಲ್ಲ, ತನ್ನ ಹಣ ಉಳಿಯುವುದು, ಆಗ ಈ ಹಣ ಯಾವ ಉಪಯೋಗಕ್ಕೆ ಬರುವುದು? ಒಂದು ವೇಳೆ ಚಾಲಕ ತನ್ನನ್ನು ಕೊಂದು ರಸ್ತೆಯ ಅಂಚಿಗೆ ಎಸೆದರೆ ಆ ಹಣ ಯಾರಿಗೆ ಸಿಗುವುದು? ನನ್ನ ಮೃತ ಶರೀರ ಯಾರಗೆ ಸಿಗುವುದೋ ಅವರಿಗೆ ಈ ಹಣ ಸಿಗುವುದು ಅಥವಾ ಪೊಲೀಸರಿಗೆ ಪೋಸ್ಟ್‌ಮಾರ್ಟಂಗೆ ಮೊದಲು ಖಂಡಿತ ಸಿಗುವುದು. ಇದಕ್ಕೆ ಬದಲು, ತಾನೇ ರಿಕ್ಷಾ ಚಾಲಕನಿಗೆ ಮೊದಲೇ ತನ್ನ ಬಳಿ ಎಷ್ಟು ಹಣವಿದೆ, ಅದನ್ನು ಎಲ್ಲಿಟ್ಟುಕೊಂಡಿದ್ದೇನೆ ಎಂದು ತಿಳಿಸಿ ಹಣ ಮತ್ತು ತನ್ನ ವಾಚನ್ನು ಅವನಿಗೆ ಕೊಡುವುದು ಲೇಸು. ಹೀಗೆ ಯೋಚಿಸಿ ಅವನು ನಿರಾಳಗೊಂಡ. ಅವನ ಕಣ್ಣುಗಳು ಈಗಲೂ ಮುಚ್ಚಿಕೊಂಡಿದ್ದವು. ಅವನಿಗೆ ರಿಕ್ಷಾ ಮುಂದಕ್ಕೆ ಹೋಗುತ್ತಿದೆಯೋ ಅಥವಾ ನಿಂತಿದೆಯೋ ಎಂಬ ಪರಿಜ್ಞಾನವೂ ಇರಲಿಲ್ಲ.

ರಿಕ್ಷಾ ಚಾಲಕನ ಉದ್ದೇಶ ತನ್ನನ್ನು ಕೊಳ್ಳೆ ಹೊಡೆಯುವುದು ಮತ್ತು ತನ್ನನ್ನು ಕೊಲ್ಲುವುದಲ್ಲವೆಂದು ಅವನು ಮತ್ತೆ ಯೋಚಿಸಿದ. ತಾನು ಚಾಲಕನ ಬಗ್ಗೆ ಯುಕ್ತಿಯೊಂದನ್ನು ಹೆಣೆಯುತ್ತಿದ್ದೇನೆ ಅಥವಾ ಅವನಿಗೆ ಹಾನಿಯನ್ನುಂಟು ಮಾಡುವವನಿದ್ದೇನೆ ಎಂಬ ಅನುಮಾನ ಬಂದಾಗ ಅವನು ತನ್ನನ್ನು ಕೊಲ್ಲಲು ಬರುತ್ತಾನೆ, ಇಲ್ಲದಿದ್ದಲ್ಲಿ ಚಾಲಕ ತನ್ನನ್ನು ಕೊಲ್ಲಲು ಯಾಕೆ ಪ್ರಯತ್ನಿಸುತ್ತಾನೆ? ಹೇಗೆ ಪ್ರಯತ್ನಿಸಿದರೂ ತಾನು ವಿಮಾನವನ್ನು ಹಿಡಿಯಲು ಸಾಧ್ಯವಾಗದು; ಒಂದು ವೇಳೆ ವಿಮಾನ ತಪ್ಪಿದರೂ, ಆಗುವುದಾದರೂ ಏನು? ತಾನು ಮೀಟಿಂಗಿಗೆ ಹೋಗಲಾರೆ, ಅಷ್ಟೆ! ಇಂಥ ಮೀಟಿಂಗ್‌ಗಳಲ್ಲಿ ಅನೇಕ ಅಧಿಕಾರಿಗಳು ಭಾಗವಹಿಸುತ್ತಾರೆ. ಮೀಟಿಂಗ್‌ನಲ್ಲಿ ಯಾರು ಭಾಗವಹಿಸುತ್ತಾರೆ ಎಂಬ ಬಗ್ಗೆ ಯಾರಿಗೂ ಚಿಂತೆಯಿರುವುದಿಲ್ಲ. ಮಂತ್ರಿಗಳು ಎಲ್ಲರ ಕೈಕುಲುಕಿದರೂ, ಮೂರ್‍ನಾಲ್ಕು ಉನ್ನತ ಅಧಿಕಾರಿಗಳನ್ನು ಹೊರತು ಪಡಿಸಿದರೆ, ಬೇರೆಯವರ ಪರಿಚಯ ಅವರಿಗಿರುವುದಿಲ್ಲ. ತಾನು